**ಕರ್ನಾಟಕ ಲೋಕಾಯುಕ್ತ**

ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2815/2022
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:02/02/2023.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: ಸರ್ಕಾರಿ ನೌಕರರಾದ **ಡಾ॥ ಗೋಸಬಾಳ ರಮೇಶಬಾಬು ಬಿನ್ ಲೇಟ್ ಜಿ.ಹೇಮಾದ್ರಿ, ಉಪ ಮುಖ್ಯ ವೈದ್ಯಾಧಿಕಾರಿಗಳು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

–0–

1) ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಇವರು ಪೋಲಿಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಡಾ॥ ಗೋಸಬಾಳ ರಮೇಶಬಾಬು ಬಿನ್ ಲೇಟ್ ಜಿ.ಹೇಮಾದ್ರಿ, ಉಪ ಮುಖ್ಯ ವೈದ್ಯಾಧಿಕಾರಿಗಳು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರಿಗೆ ನಿವೇದಿಸಿಕೊಂಡಿದ್ದು, ಅದರ ಆಧಾರದ ಮೇಲೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ರವರು, ಪೋಲಿಸ್ ಉಪಾಧಿಕ್ಷಕರು, ಕ.ಲೋ ಬಳ್ಳಾರಿ ರವರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಅದರನ್ವಯ ಬಳ್ಳಾರಿ, ಲೋಕಾಯುಕ್ತ ಪೋಲಿಸ್ ಠಾಣೆಯ ಗುನ್ನೆ ನಂ. 05/2015 ರಲ್ಲಿ ಕಲಂ 13

(1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

2) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ದಿನಾಂಕ 05/10/1999 ರಿಂದ ದಿ: 28/04/2015 ರ ವರೆಗಿನ ಪರಿಶೀಲನಾ ಅವಧಿಯಲ್ಲಿ ಎದುರುದಾರರು ಹಾಗೂ ಅವರ ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

**ಸ್ಥಿರಾಸ್ತಿಗಳ ವಿವರ: ಮನೆಗಳು ಜಮೀನು ಮತ್ತು ನಿವೇಶನ**

| | |
|---|---|
| 1. | ಎದುರುದಾರರು ಬಳ್ಳಾರಿಯ ವಿಜಯನಗರ ಕಾಲೋನಿ(ಕಂಟೋನ್ಮೆಂಟ್) ಪ್ಲಾಟ್ ನಂ.03, ಟಿ.ಎಸ್.ನಂ. 249/3, ವಾರ್ಡ್‌ನಂ. 23 ಅಸೆಸ್‌ಮೆಂಟ್ ನಂ. 40073 ನಿವೇಶನ ವಿಸ್ತೀರ್ಣ 50 * 80 ನೇದ್ದನ್ನು ದಿ: 04-09-1991 ರಂದು ರೂ.72,000/- ಗಳಿಗೆ ಅವರ ಹೆಸರಿನಲ್ಲಿ ಖರೀದಿಸಿದ್ದು, ಸದರಿ ನಿವೇಶನದಲ್ಲಿ ನೆಲಮಹಡಿ ಮತ್ತು 1ನೇ ಮಹಡಿ ಮನೆಯನ್ನು 2001 ನೇ ಸಾಲಿನಲ್ಲಿ ನಿರ್ಮಾಣ ಮಾಡಿದ್ದು, ಸದರಿ ಕಟ್ಟಡ ನಿರ್ಮಾಣದ ಒಟ್ಟು ಮೌಲ್ಯ ರೂ.**32,54,338/-**. |
| 2. | ಎದುರುದಾರರು ಅವರ ಪತ್ನಿ ಶ್ರೀಮತಿ ಜಿ.ಆಶಾ ರವರ ಹೆಸರಿನಲ್ಲಿರುವ ಬಳ್ಳಾರಿಯ ವಿಜಯನಗರ ಕಾಲೋನಿ(ಕಂಟೋನ್ಮೆಂಟ್) ಪ್ಲಾಟ್ ನಂ.60 ಮತ್ತು 59ಎ, ಬ್ಲಾಕ್ ನಂ.02, ವಾರ್ಡ್ ನಂ. 25, ಟಿ.ಎಸ್.ನಂ. 244/2 ಮತ್ತು 244/3ಬಿ ನಿವೇಶನ ವಿಸ್ತೀರ್ಣ ಒಟ್ಟು 3500 ಚದರಅಡಿಗಳಲ್ಲಿ, ನೆಲಮಹಡಿ, 1ನೇ ಮಹಡಿ, 2ನೇ ಮಹಡಿ ಮತ್ತು 3ನೇ ಮಹಡಿ ವಾಣಿಜ್ಯ ಕಟ್ಟಡ ನಿರ್ಮಾಣವನ್ನು 2009 ನೇ ಸಾಲಿನಲ್ಲಿ ಮಾಡಿದ್ದು, ಸದರಿ ಕಟ್ಟಡ ನಿರ್ಮಾಣದ ಒಟ್ಟು ಮೌಲ್ಯ ರೂ.**79,62,096/-** |
| 3. | ಎದುರುದಾರರು ಅವರ ತಂದೆ ಶ್ರೀ ಹೇಮಾದ್ರಿ ರವರು ಬಳ್ಳಾರಿ ವಿಜಯನಗರ ಕಾಲೋನಿಯ ಕಂಟೋನ್ಮೆಂಟ್ ಪ್ರದೇಶದ ಟಿ.ಎಸ್.ನಂ. 244/ಎ-1/ಎ-1/ಬಿ ಪ್ಲಾಟ್ ನಂ.5 ಬ್ಲಾಕ್ ನಂ.22 ಅಸೆಸ್‌ಮೆಂಟ್ ನಂ. 40074/49586/49690ಬಿ, ಡೋರ್ ನಂ. 05 ರ ನಿವೇಶನ ವಿಸ್ತೀರ್ಣ 70*50 ಅಡಿಗಳು ಒಟ್ಟು 3,500 ಚದರ ಅಡಿಗಳ ನಿವೇಶನದಲ್ಲಿ ಚೆಕ್ ಪೂರ್ವ ಅವಧಿಯಲ್ಲಿ ನೆಲಮಹಡಿಯನ್ನು ನಿರ್ಮಾಣ ಮಾಡಿದ್ದು, ನಂತರ ಚೆಕ್ ಅವಧಿಯಲ್ಲಿ 2004-05 ನೇ ಸಾಲಿನಲ್ಲಿ ಮೊದಲನೇ ಮಹಡಿ |

**ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2815/2022**

| | |
|---|---|
| | ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. ನಂತರ ದಿ:18-02-2005 ರಂದು ಎದುರುದಾರರ ತಂದೆ ಶ್ರೀ ಜಿ.ಹೇಮಾದ್ರಿ ಇವರು ದಾನ ಪತ್ರ ಡೀಡ್ ನಂ. 9401/2004-05 ರ ಮೂಲಕ ನೊಂದಣಿ ಮಾಡಿಸಿರುತ್ತಾರೆ. ಸದರಿ ಕಟ್ಟಡ ನಿರ್ಮಾಣದ **ಒಟ್ಟು ಮೌಲ್ಯ ರೂ.13,11,351/-.** |
| 4. | ಎದುರುದಾರರು ಅವರ ಪತ್ನಿ ಶ್ರೀಮತಿ ಜಿ.ಆಶಾರವರ ಹೆಸರಿನಲ್ಲಿ ಬಳ್ಳಾರಿ ವಿಜಯನಗರ ಕಾಲೋನಿ (ಕಂಟೋನ್ಮೆಂಟ್) ಪ್ಲಾಟ್ ನಂ. 60 ಮತ್ತು 59 ಎ, ಬ್ಲಾಕ್ ನಂ. 02 ವಾರ್ಡ ನಂ. 25, ಟಿ.ಎಸ್.ನಂ. 244/2 ಮತ್ತು 244/3ಬಿ ಮುನಿಸಿಪಲ್ ಅಸೆಸ್‌ಮೆಂಟ್ ನಂ.40075/40076/49537 ನಿವೇಶನ ವಿಸ್ತೀರ್ಣ 3500 ಚದರಅಡಿಗಳು ನೇದ್ದನ್ನು ದಿ:24-06-2005 ರಂದು ಶ್ರೀಮತಿ ಎ ಇಂದಿರಾ ಕುಮಾರಿ ಗಂಡ ಲೇಟ್ ಎ. ಸೂರ್ಯನಾರಾಯಣ ಶಾಸ್ತ್ರೀ ರವರಿಂದ **ರೂ.7,85,000/- ಗಳಿಗೆ ಖರೀದಿಸಿರುತ್ತಾರೆ.** |
| 5. | ಎದುರುದಾರರು ಅವರ ಪತ್ನಿ ಶ್ರೀಮತಿ ಜಿ.ಆಶಾರವರ ಹೆಸರಿನಲ್ಲಿ ಬಳ್ಳಾರಿ ವಿಜಯನಗರ ಕಾಲೋನಿ (ಕಂಟೋನ್ಮೆಂಟ್) ಮಾರ್ಕೆಟ್ ರೋಡ್, ಹೊಸ ಮಹಾನಗರ ಪಾಲಿಕೆ, ವಾರ್ಡ ನಂ.23 ಹಳೆ ಸಿ.ಮು.25ನೇ ವಾರ್ಡ ಸಿಟಿಎಸ್ ವಾರ್ಡ ನಂ.22, ಟಿಎಸ್ ನಂ.244/3ಬಿ ಬ್ಲಾಕ್ ನಂ.22 ಮುನಿಸಿಪಲ್ ಅಸೆಸ್‌ಮೆಂಟ್ ನಂ.50370/40266/41594ಬಿ ವುಳ್ಳ ನಿವೇಶನ ವಿಸ್ತೀರ್ಣ 420 ಚದರ ಅಡಿಗಳು ನೇದ್ದನ್ನು ದಿ:19-01-2006 ರಂದು ಶ್ರೀಮತಿ ಎ.ಎಸ್. ಮಾದವಿ ಗಂಡ ಎಸ್ ಶ್ರೀದರಮೂರ್ತಿ ರವರಿಂದ **ರೂ.48,500/- ಗಳಿಗೆ ಖರೀದಿಸಿರುತ್ತಾರೆ.** |

**ಸ್ಥಿರಾಸ್ತಿಯ ಒಟ್ಟು ಮೌಲ್ಯ ರೂ.: 1,33,61,285/-**

**ಚರಾಸ್ಥಿಯ ವಿವರ:-**

| | **ಮೋಟಾರು ವಾಹನಗಳು** |
|---|---|
| 06. | ಎದುರುದಾರರು ಅವರ ಪತ್ನಿಯ ಹೆಸರಿನಲ್ಲಿರುವ ಮಾರುತಿ ಸುಜುಕಿ ಸ್ವಿಪ್ಟ್ ಕಾರ್ ನಂ. ಕೆ.ಎ. 34/ಎನ್-4572 ನೇದ್ದನ್ನು ದಿ:29-09-2014 ರಂದು ಖರೀದಿಸಿದ್ದು, ಮೌಲ್ಯ: **ರೂ. 7,57,961/-** |
| 07 | ಎದುರುದಾರರು ಅವರ ಹೆಸರಿನಲ್ಲಿರುವ ಹಿರೋ ಹೋಂಡಾ ಮೋಟಾರ್ ಸೈಕಲ್ ಕೆ.ಎ. 34 ಎಲ್. 3123 ನೇದ್ದನ್ನು, ದಿ:14-07-2003, ರಂದು ಖರೀದಿಸಿದ್ದು, ಮೌಲ್ಯ: **ರೂ.41,884/-** |
| 08 | ಎದುರುದಾರರು ಅವರ ಹೆಸರಿನಲ್ಲಿರುವ ಹೀರೊ ಹೊಂಡಾ ಪ್ಲೆಜರ್ ಮೋಟರ್ ಸೈಕಲ್ ನಂ. ಕೆಎ-34ವೈ441 ನೇದ್ದನ್ನು, ದಿ:09.09.2011ರಂದು ಖರೀದಿಸಿದ್ದು, |

| | | |
|---|---|---|
| | ಮೌಲ್ಯ | **ರೂ. 40,875/-** |
| 09 | ಎದುರುದಾರರು ಅವರ ತಂದೆ ಶ್ರೀ ಹೇಮಾದ್ರಿ ರವರ ಹೆಸರಿನಲ್ಲಿರುವ ಮಾರುತಿ ಓಮನಿ ನಂ. ಕೆಎ-34/ಎಂ8109 ವಾಹನವನ್ನು ದಿ:09-07-2001 ರಂದು ಖರೀದಿಸಿದ್ದು, ಮೌಲ್ಯ: | **ರೂ. 2,31,449/-** |
| | ದ್ವಿಚಕ್ರ ವಾಹನ ಮತ್ತು ಕಾರುಗಳ ಒಟ್ಟು ಮೊತ್ತ | **ರೂ. 10,72,169/-** |
| | **ಬ್ಯಾಂಕ್ ಖಾತೆಗಳು** | |
| 10. | ಎದುರುದಾರರು ಅವರ ಹೆಸರಿನಲ್ಲಿರುವ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಗಾಂಧಿನಗರ ಬ್ರ್ಯಾಂಚ್, ಬಳ್ಳಾರಿ ಖಾತೆ ನಂ. 10605100018801 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 799/-** |
| 11. | ಎದುರುದಾರರು ಅವರ ತಂದೆ ಜಿ. ಹೇಮಾದ್ರಿ ರವರ ಹೆಸರಿನಲ್ಲಿರುವ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಗಾಂಧಿನಗರ ಬ್ರ್ಯಾಂಚ್, ಬಳ್ಳಾರಿ ಖಾತೆ ನಂ. 10605100018777 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 291/-** |
| 12. | ಎದುರುದಾರರು ಅವರ ಹೆಸರಿನಲ್ಲಿರುವ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಡಿ.ಸಿ ಕಾಂಪೌಂಡ್ ಬ್ರ್ಯಾಂಚ್, ಕೊಪ್ಪಳ, ಎಸ್.ಬಿ.ಖಾತೆ ನಂ.10887101005084 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 204/-** |
| 13. | ಎದುರುದಾರರು ಅವರ ಹೆಸರಿನಲ್ಲಿರುವ ಎಸ್.ಬಿ.ಐ ಬ್ಯಾಂಕ್, ಖಾತೆ ನಂ.301042224023 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 1,21,270/-** |
| 14. | ಎದುರುದಾರರು ಅವರ ಪತ್ನಿಯ ಹೆಸರಿನಲ್ಲಿರುವ ಎಸ್.ಬಿ.ಐ ಬ್ಯಾಂಕ್, ಖಾತೆ ನಂ.20022894902 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 14,302/-** |
| 15. | ಎದುರುದಾರರು ಅವರ ಹೆಸರಿನಲ್ಲಿರುವ ಎಸ್.ಬಿ.ಎಂ ಬ್ಯಾಂಕ್, ಖಾತೆ ನಂ.54023533634 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು | **ರೂ. 3,892/-** |
| 16. | ಎದುರುದಾರರು ಅವರ ತಂದೆ ಜಿ.ಹೇಮಾದ್ರಿ ರವರ ಹೆಸರಿನಲ್ಲಿರುವ ಎಸ್.ಬಿ.ಎಂ | |

| | |
|---|---|
| | ಬ್ಯಾಂಕ್, ಖಾತೆ ನಂ.54023520658 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 96,746/- |
| 17. | ಎದುರುದಾರರು ಅವರ ಪತ್ನಿ ಶ್ರೀಮತಿ ಆಶಾ ರವರ ಹೆಸರಿನಲ್ಲಿರುವ ಎಸ್.ಬಿ.ಎಂ ಬ್ಯಾಂಕ್, ಖಾತೆ ನಂ.64011675363 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 623/- |
| 18. | ಎದುರುದಾರರು ಅವರ ಹೆಸರಿನಲ್ಲಿರುವ ಎಸ್.ಬಿ.ಐ ಟ್ರೆಜರ್ ಬ್ರ್ಯಾಂಚ್, ಕೊಪ್ಪಳ ಎಸ್.ಬಿ. ಖಾತೆ ನಂ.62283468860 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 585/- |
| 19. | ಎದುರುದಾರರು ಅವರ ಹೆಸರಿನಲ್ಲಿರುವ ಸುಕೋ ಬ್ಯಾಂಕ್, ಮೋಕಾ ರೋಡ್, ಬಳ್ಳಾರಿ. ಖಾತೆ ನಂ. 94000624735/11501062473, ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 1,072/- |
| 20. | ಎದುರುದಾರರು ಅವರ ಹೆಸರಿನಲ್ಲಿರುವ ಸಿಂಡಿಕೇಟ್ ಬ್ಯಾಂಕ್, ರಾಯಲ್ ಸರ್ಕಲ್ ಬ್ರ್ಯಾಂಚ್, ಬಳ್ಳಾರಿ, ಎಸ್.ಬಿ. ಖಾತೆ ನಂ. 06022180003377 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 00/- |
| 21. | ಎದುರುದಾರರು ಅವರ ಹೆಸರಿನಲ್ಲಿರುವ ಇಂಡಿಯನ್ ಬ್ಯಾಂಕ್, ಖಾತೆ ನಂ. 14483/509409629 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 803/- |
| 22 | ಎದುರುದಾರರು ಅವರ ಹೆಸರಿನಲ್ಲಿರುವ ವಿಜಯ ಬ್ಯಾಂಕ್, ಖಾತೆ ನಂ. 102701010008652 ನೇದ್ದರಲ್ಲಿ ಇರುವ ಅಂತಿಮ ಶಿಲ್ಕು<br>ರೂ. 204/- |
| | **ಬ್ಯಾಂಕ್ ಖಾತೆಯಲ್ಲಿರುವ ಒಟ್ಟು ಮೊತ್ತ ರೂ. 2,40,791/-** |
| | **ಬ್ಯಾಂಕ್‌ನಲ್ಲಿರುವ ಠೇವಣಿ** |
| 23 | ಎದುರುದಾರರು ಅವರ ಪತ್ನಿ ಶ್ರೀಮತಿ ಆಶಾ ರವರ ಹೆಸರಿನಲ್ಲಿರುವ ಎಸ್.ಬಿ.ಎಂ (ಕಂಟೋನ್ಮೆಂಟ್ ಬ್ರ್ಯಾಂಚ್), ಬಳ್ಳಾರಿ ಖಾತೆ ನಂ.64144782511 ರಲ್ಲಿರುವ ಠೇವಣಿ ಹಣ ಒಟ್ಟು<br>ರೂ. 16,00,000/- |

**ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2815/2022**

| | |
|---|---|
| | **ಬ್ಯಾಂಕ್ ಲಾಕರ್‌ನಲ್ಲಿ ದೊರೆತ ಬಂಗಾರ ಮತ್ತು ಬೆಳ್ಳಿಯ ವಸ್ತುಗಳು** |
| 24 | ಎದುರುದಾರರು ಅವರ ತಂದೆ ಶ್ರೀ ಹೇಮಾದ್ರಿ ರವರ ಹೆಸರಿನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಂಟೋನ್ಮೆಂಟ್ ಬ್ರಾಂಚ್, ಬಳ್ಳಾರಿ ಬ್ಯಾಂಕ್‌ನ ಲಾಕರ್‌ನಲ್ಲಿ ದೊರೆತ ಬಂಗಾರದ ಆಭರಣಗಳು ಒಟ್ಟು ತೂಕ 354.110 ಗ್ರಾಂ ಒಟ್ಟು ಮೌಲ್ಯ **ರೂ.9,02,978/-** |
| 25 | ಬೆಳ್ಳಿಯ ವಸ್ತುಗಳು ಒಟ್ಟು ತೂಕ 1,568 ಗ್ರಾಂ ಒಟ್ಟು ಮೌಲ್ಯ **ರೂ. 47,040/-** |
| | **ಪೋಸ್ಟ್ ಆಫಿಸ್‌ನಲ್ಲಿ ಹೊಂದಿರುವ ಖಾತೆಗಳ ವಿವರ** |
| 26 | ಎದುರುದಾರರು ಅವರ ಹೆಸರಿನಲ್ಲಿ ಬಳ್ಳಾರಿ ಹೆಡ್ ಪೋಸ್ಟ್ ಆಫಿಸ್‌ನಲ್ಲಿ ಹೊಂದಿರುವ ಆರ್‌ಪಿಎಲ್‌ಐ ಪಾಲಿಸಿ ನಂ. 80808 ರಲ್ಲಿರುವ ಒಟ್ಟು ಮೌಲ್ಯ **ರೂ.61,320/-** |
| 27 | ಎದುರುದಾರರು ಅವರ ಮಗಳು ಕು॥ ಜಿ.ಆರ್.ಸೌಮ್ಯ ಇವರ ಹೆಸರಿನಲ್ಲಿ ಹೊಂದಿರುವ ಕೆವಿಪಿ 48 ಸಿಡಿ 460443 ರಿಂದ 460472 (ಒಟ್ಟು 30 ಕೆವಿಪಿಗಳು) ರಿಜಿಸ್ಟ್ರೇಷನ್ ನಂ. 14947 ಗಳ ಒಟ್ಟು ಮೌಲ್ಯ **ರೂ.3,00,000/-** |
| | **ದಾಳಿ ಸಮಯದಲ್ಲಿ ದೊರೆತ ನಗದು ಹಣ, ಬಂಗಾರ ಮತ್ತು ಬೆಳ್ಳಿ ವಸ್ತುಗಳು** |
| 28 | ಎದುರುದಾರರ ವಾಸದ ಮನೆ ದಾಳಿ ಮಾಡಿದ ದಿ:28-04-2015 ರಂದು ದೊರೆತ ನಗದು ಹಣದ ಒಟ್ಟು ಮೌಲ್ಯ **ರೂ.1,06,671/-** |
| 29 | ಎದುರುದಾರರ ವಾಸದ ಮನೆ ದಾಳಿ ಮಾಡಿದ ದಿ:28-04-2015 ರಂದು ದೊರೆತ ಬಂಗಾರದ ಆಭರಣಗಳು (ಒಟ್ಟು ತೂಕ 984.78 ಗ್ರಾಂ) ಒಟ್ಟು ಮೌಲ್ಯ **ರೂ.18,71,700/-** |
| 30 | ಎದುರುದಾರರ ವಾಸದ ಮನೆ ದಾಳಿ ಮಾಡಿದ ದಿ:28-04-2015 ರಂದು ದೊರೆತ ಬೆಳ್ಳಿಯ ವಸ್ತುಗಳು (ಒಟ್ಟು ತೂಕ 6,648.63 ಗ್ರಾಂ) ಒಟ್ಟು ಮೌಲ್ಯ **ರೂ.1,54,459/-** |
| | **ಗೃಹೋಪಯೋಗಿ ವಸ್ತುಗಳು** |
| 31 | ಎದುರುದಾರರ ವಾಸದ ಮನೆಯಲ್ಲಿ ದಾಳಿಯ ಸಮಯದಲ್ಲಿ ದೊರೆತ ವಸ್ತುಗಳ ಒಟ್ಟು ಮೌಲ್ಯ **ರೂ.7,22,480/-** |
| 32 | ಎದುರುದಾರರ ವಾಸದ ಮನೆಯಲ್ಲಿ ದಾಳಿಯ ಸಮಯದಲ್ಲಿ ದೊರೆತ ಮೊಬೈಲ್‌ಗಳ ಒಟ್ಟು ಮೊತ್ತ **ರೂ.2,07,625/-** |
| 33 | ಎದುರುದಾರರು ಜೆಸ್ಕಾಂ, ಬಳ್ಳಾರಿ ಇವರಲ್ಲಿ ಎಲೆಕ್ಟ್ರಿಕ್ ಮೀಟರ್ ಠೇವಣಿಯಾಗಿ, ಸ್ಥಿರ ದೂರವಾಣಿಗೆ ಠೇವಣಿಯಾಗಿ ಹಾಗೂ ಹೆಚ್‌ಪಿ ಗ್ಯಾಸ್‌ಗೆ ಠೇವಣಿಯಾಗಿ ಇಟ್ಟ |

| | |
|---|---|
| | ಒಟ್ಟು ಮೊತ್ತ **ರೂ.13,145/-** |
| | **ಎಲ್‌ಐಸಿ ಪಾಲಿಸಿಗಳ ವಿವರ** |
| 34 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:663483154 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.1,05,400/-** |
| 35 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:660726946 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.1,37,872/-** |
| 36 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:664931158 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.1,46,136/-** |
| 37 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:650338129 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.75,360/-** |
| 38 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:660385931 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.80,000/-** |
| 39 | ಎದುರುದಾರರ ಮಗ ಕಿರಣ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:664058706 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.30,000/-** |
| 40 | ಎದುರುದಾರರ ಮಗಳು ಐಶ್ವರ್ಯ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:664058707 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.30,000/-** |
| 41 | ಎದುರುದಾರರ ಮಗಳು ಸೌಮ್ಯ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:664058708 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.30,000/-** |
| 42 | ಎದುರುದಾರರ ಹೆಸರಿನಲ್ಲಿರುವ ಎಲ್‌ಐಸಿ ಪಾಲಿಸಿ ಸಂ:660848277 ರಲ್ಲಿ ತೊಡಗಿಸಿದ ಒಟ್ಟು ಮೊತ್ತ **ರೂ.13,975/-** |

3. ಎದುರುದಾರರು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನೇಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಆದರೆ ಎದುರುದಾರರು ದಿ:05/10/1999 ರಂದು ಆರೋಗ್ಯ ಇಲಾಖೆಯಲ್ಲಿ ವೈದ್ಯರಾಗಿ ಕರ್ತವ್ಯಕ್ಕೆ ಸೇರಿದ್ದು, 2007-08 ನೇ ಸಾಲಿನಲ್ಲಿ ಮೊದಲ ಬಾರಿಗೆ ಎಪಿಆರ್‌ನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸನ್ 1999ರಿಂದ 2006-07ರವರೆಗಿನ ಅವದಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನೇಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸದೇ ಕರ್ನಾಟಕ ನಾಗರೀಕ ಸೇವಾ (ನಡತೆ)

ನಿಯಮಗಳು 1966ರ ನಿಯಮ 23(1) ರ ನಿಯಮ ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4. ಎದುರುದಾರರು ಖಾಸಗಿ ಆಗಿ ಹೊಂದಿದ್ದ ಎಲ್ಲಾ ಜೀವ ವಿಮಾ ಪಾಲಿಸಿಗಳ ವಿವರಗಳನ್ನು, ಬ್ಯಾಂಕಗಳ ಬಡ್ಡಿ ವಿವರಗಳನ್ನು, ಬ್ಯಾಂಕನಲ್ಲಿ ಠೇವಣಿಯಾಗಿ ಇಟ್ಟ ಮೊತ್ತದ ವಿವರಗಳನ್ನು ಮತ್ತು ಮಾರ್ಗದರ್ಶಿ ಚಿಟ್ಸ್‌ನಲ್ಲಿ ಹಣ ಹೂಡಿದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಿರುವುದಿಲ್ಲ. ಇದರಿಂದ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮ 1966 ರ ನಿಯಮ 23(3) (ಎ) ಅನ್ನು ಉಲ್ಲಂಘಿಸಿರುವುದು ಕಂಡು ಬರುತ್ತದೆ.

5. ಎದುರುದಾರರು ಅವರ ಸೇವಾ ಅವಧಿಯಲ್ಲಿ ಅವರ ಹೆಸರಿನಲ್ಲಿ ವಾಸದ ಮನೆಯ ಕಟ್ಟಡವನ್ನು ನಿರ್ಮಾಣ ಮಾಡಲು, ಅವರ ತಂದೆಯ ಹೆಸರಿನಲ್ಲಿಯ 1ನೇ ಮಹಡಿಯ ಕಟ್ಟಡವನ್ನು ನಿರ್ಮಾಣ ಮಾಡಲು ಮತ್ತು ಅವರ ಪತ್ನಿಯ ಹೆಸರಿನಲ್ಲಿ ನಿವೇಶನವನ್ನು ಖರೀದಿಸಲು ಮತ್ತು ವಾಣಿಜ್ಯ ಕಟ್ಟಡವನ್ನು ನಿರ್ಮಾಣ ಮಾಡಲು ಹಾಗೂ ಚರಾಸ್ಥಿಗಳನ್ನು ಖರೀದಿಸಲು ಅವರ ಮೇಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ತನಿಖಾಧಿಕಾರಿಗಳು ಎದುರುದಾರರು ಹೊಂದಿದ ಆಸ್ತಿ ಮತ್ತು ದಾಯಿತ್ವದ ಬಗ್ಗೆ ಪೂರ್ಣ ವಿವರಣೆ ಕೇಳಿ ಅನುಭಂಧಗಳಲ್ಲಿ ಮಾಹಿತಿಯನ್ನು ಕೋರಿದ್ದು ಎದುರುದಾರರು ಮಾಹಿತಿ ಹಾಗೂ ವಿವರಣೆಯನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ನ್ಯಾಯಸಮ್ಮತವಾದವುಗಳನ್ನು ತನಿಖೆಯಲ್ಲಿ ಪರಿಗಣಿಸಿದ್ದು ಇರುತ್ತದೆ.

7. ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಎದುರುದಾರರ, ಅವರ ತಂದೆ, ಅವರ ಪತ್ನಿ ಮತ್ತು ಮಕ್ಕಳ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಎದುರುದಾರರು ನಿಯಮಗಳನ್ನು ಪಾಲಿಸದೇ ಇರುವುದು ಅವರ ದುರ್ನಡತೆಯನ್ನು ತೋರಿಸುತ್ತದೆ.

8. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರು ಅವರ ಕರ್ತವ್ಯದಲ್ಲಿ ನಿಯಮವನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ನಿಯಮ 23(1)(2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24(1)(2)(3) ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ: 19/09/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ನಾನು ಮೇಲ್ಕಂಡ ಸ್ಥಿರ ಮತ್ತು ಚರಾಸ್ತಿಗಳನ್ನು ಗಳಿಸಿರುವುದು ಪರಿಶೀಲನಾ ಅವಧಿಯಾದ ದಿನಾಂಕ 5/10/199 ರಿಂದ ದಿನಾಂಕ 28/04/2015 ರ ವರೆಗೆ ಆಗಿದ್ದು, ಈ ಘಟನಾವಳಿಗಳು ನಡೆದು 5 ವರ್ಷಗಳು ಸಂಪೂರ್ಣವಾಗಿ ಗತಿಸಿದ ನಂತರ ನನ್ನ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ

ಉಪಲೋಕಾಯುಕ್ತರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುವುದು ಇದೇ ಕಾಯ್ದೆಯ ಕಲಂ 8 (2) (ಡಿ) ರ ಸ್ಪಷ್ಟ ಉಲ್ಲಂಘನೆ ಆಗಿರುತ್ತದೆ" ಎಂದು ತಿಳಿಸಿ ಇದಕ್ಕೆ ಪೂರಕವಾಗಿ ಕರ್ನಾಟಕ ಉಚ್ಛ ನ್ಯಾಯಾಲಯವು ಶ್ರೀ ಎಸ್. ಎಸ್. ತುಪ್ಪದ್ –ವಿರುದ್ಧ– ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅರ್ಜಿ ಸಂಖ್ಯೆ 406/2014 ರ ಪ್ರಕರಣದಲ್ಲಿ ದಿನಾಂಕ 22/07/2014 ರಂದು ನೀಡಿದ ತೀರ್ಪನ್ನು ಉಲ್ಲೇಖಿಸಿರುತ್ತಾರೆ ಮತ್ತು ಮೇಲೆ ಹೇಳಿದಂತೆ ತನ್ನ ವಿರುದ್ಧ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ರ ಕಲಂ 7(2) ರ ಪ್ರಕಾರ ತನಿಖೆಯನ್ನು ಕೈಗೊಂಡಿರುವುದು ಇದೇ ಅಧಿನಿಯಮದ ಕಲಂ 8 (2)(ಡಿ) ಅಡಿಯಲ್ಲಿ ಬಾಧಿಸಲ್ಪಡುವುದರಿಂದ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿರುವ ಆಪಾದನೆಗಳು ಗೌರವಾನ್ವಿತ ಉಪಲೋಕಾಯುಕ್ತ ಇವರ ತನಿಖೆಗೆ ಒಳಪಡದ ವಿಷಯವಾಗಿರುವುದರಿಂದ ಕೈಗೊಂಡಿರುವ ತನಿಖೆಯನ್ನು ಸ್ಥಗಿತಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ. ಪೋಲಿಸರ ವರದಿಯ ಮೇಲಿಂದ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುವುದರಿಂದ ಎದುರುದಾರರು ಉಲ್ಲೇಖಿಸಿರುವ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 8 (2)(ಡಿ) ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ. ಕಾರಣ ಅವರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಎದುರುದಾರರ ಮೇಲಿನ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10. ಆದ್ದರಿಂದ ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮಗಳು 3 (1) (i), (ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬಂದಿದ್ದರಿಂದ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗುತ್ತಿದೆ.

(1) ಎದುರುದಾರರಾದ **ಡಾ॥ ಗೋಸಬಾಳ ರಮೇಶಬಾಬು ಬಿನ್ ಲೇಟ್ ಜಿ.ಹೇಮಾದ್ರಿ, ಉಪ ಮುಖ್ಯ ವೈದ್ಯಾಧಿಕಾರಿಗಳು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ** (ನಿವೃತ್ತಿ ದಿನಾಂಕ 31/03/2025) ಇವರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

(2) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, page 3047, State of Karnataka v/s Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು, ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ಅಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.